ವಿಂಗಡಣೆ ಕಾರ್ಯ ಅವಶ್ಯಕವೆಂದು ತಿಳಿದು ನಾವು ಒಂದು ಸವಿಂತಿಯನ್ನು ನೇಮಕ ಮಾಡಿದ ವೇಲೆ ಆ ಸವಿಂತಿಯ ವರದಿ ಕೂಡ ಬಂದಿದೆ. ಆದರ ಬಗ್ಗೆ ಆದಷ್ಟುಬೇಗ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ. ನನ್ನ ಗಮನಕ್ಕೆಬಂದಿರುವಂತೆ ಚಿಕ್ಕೋಡಿ ತಾಲ್ಲೂಕಿನಲ್ಲಿ ೩ ವಿಧಾನ ಸಭಾ ಕ್ಷೇತ್ರಗಳಿವೆ. ಹಿಂದೆ ಐ. ಆರ್. ಡಿ. ಪಿ, ಬೆನಿಫಿಟ್ಸ್ ಕೊಡುವಾಗ ಒಂದೊಂದು ತಾಲ್ಲೂಕಿಗೆ ೬೦೦ ಜನ ಎಂದು ಲೆಕ್ಕ ಮಾಡಿದ್ದೇವೆ. ೭ ಅಸೆಂಬ್ಲಿ ಕ್ಷೇತ್ರಗಳಿಗೆ ೧೧ ಕ್ಷೇತ್ರಗಳಾಗುತ್ತವೆಂಬುದನ್ನು ಮನಗಂಡು ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಪಟ್ಟಂತೆ ಮಂಡಲ ಎಂದು ಈಗ ಮಾಡುತ್ತಿದ್ದೇವೆ. ಕಳೆದ ಒಂದು ವರ್ಷದಿಂದ ಈ ಸಿಸ್ಟಂನ್ನು ತಂದಿದ್ದೇವೆ. ಪ್ರತಿಯೊಂದು ಮಂಡಲಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಬೇಕೋ ಅಷ್ಟು ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಬೆಳಗಾಂ ಜಿಲ್ಲೆಯಲ್ಲಿ ಹೆಚ್ಚು ಕಬ್ಬನ್ನು ಬೆಳೆಯುತ್ತಾರೆ. ಖಾನಪುರ ವಿಚಾರದಲ್ಲಿ ಕೂಡ ಇದೇ ಅಭಿಪ್ರಾಯ ಬಂತು. ಆದ್ದರಿಂದ ಈ ಮಂಡಲದ ಆಧಾರದ ಮೇಲೆ ನಾವು ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಮೈಸೂರು ಜಿಲ್ಲೆಯಲ್ಲಿ ಮೈಸೂರನ್ನೇ ಒಂದು ಜಿಲ್ಲೆ, ನಂಜನಗೂಡನ್ನೇ ಒಂದು ಜಿಲ್ಲೆ ಎಂದು ಮಾಡಬೇಕೆಂದು ಶಿಫಾರಸು ಬಂದಿದೆಯೆಂದು ನಾನು ಕೇಳಿದ್ದೇನೆ. ಡೆವಲಪ್‌ಮೆಂಟ್ ಆ್ಯಕ್ಟಿವಿಟೀಲ್ ಜೊತೆಗೆ ಇನ್ನೂ ಬೇರೆ ಬೇರೆ ವಿಚಾರಗಳು ಇಲ್ಲಿ ಬರುತ್ತವೆ. ಆದ್ದರಿಂದ ಇವರ ಬಗ್ಗೆ ಯಾವಾಗ ನೀವು ತೀರ್ಮಾನವನ್ನು ತೆಗೆದುಕೊಳ್ಳುತ್ತೀರೆಂದು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆದಷ್ಟುಬೇಗ.

ರಾಜ್ಯದಲ್ಲಿ ನಿರುದ್ಯೋಗಿ ಸಮಸ್ಯೆ

೬೬೧ (೫) ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಿನಾಂಕ ೧-೧-೮೭ ರಂದು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದ ನಿರುದ್ಯೋಗಿ, ಪದವೀಧರರು, ಪದವಿಯೇತರರು ಮಂತ್ರಿ ವೃತ್ತಿ ಪದವೀಧರರ ಸಂಖ್ಯೆ,

ಆ) ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ, (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

ಅ) ದಿನಾಂಕ ೧-೧-೮೭ ರಂದು. ೭೬,೫೦೨ ಪದವೀಧರರು, ೫೬,೯೯೨ ಪದವಿಯೇತರರು. ಮತ್ತು ೩೧,೧೯೪ ವೃತ್ತಿ ಪದವೀಧರರು ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಉದ್ಯೋಗ ಸಹಾಯಕ್ಕಾಗಿ ನೋಂದಾಯಿಸಿ ಕೊಂಡಿದ್ದರು.

ಆ) ಎಲ್ಲಾ ನಿರುದ್ಯೋಗಿಗಳಿಗೂ ಅದರಲ್ಲೂ ವಿದ್ಯಾವಂತ ನಿರುದ್ಯೋಗಿಗಳಿಗೆ ವೇತನದ ಉದ್ಯೋಗಗಳು ದೊರಕುವುದು ಕಷ್ಟವಾಗಿರುವುದರಿಂದ ಬ್ಯಾಂಕಿಂಗ್ ಹಾಗೂ ಹಣಕಾಸು ಸಂಸ್ಥೆಗಳು ಒದಗಿಸುವ ಸಾಲ ಮತ್ತು ಇನ್ನಿತರ ಸೌಲಭ್ಯಗಳನ್ನು ಉಪಯೋಗಿಸಿ ಕೊಂಡು ಸ್ವಯಂ ಉದ್ಯೋಗದಲ್ಲಿ ನಿರತರಾಗಬೇಕು, ಈ ಬಗ್ಗೆ ವಿದ್ಯಾವಂತ ನಿರುದ್ಯೋಗಿಗಳಿಗೆ ಅಗತ್ಯವಿರುವ ಉತ್ತೇಜನ ಸರ್ಕಾರ ದೊರಕಿಸಿ ಕೊಡುತ್ತದೆ.

ಸ್ವಾಮಿ, ನಿರುದ್ಯೋಗ ಸಮಸ್ಯೆ ಎಂಬುದು ರಾಷ್ಟ್ರೀಯ ಸಮಸ್ಯೆ. ಇದು ಬೃಹದಾಕಾರವಾಗಿ ಬೆಳೆದಿದೆ. ಇದಕ್ಕೆ ಸಂಬಂಧಪಟ್ಟಂತೆ ನಮ್ಮ ರಾಜ್ಯ ಸರ್ಕಾರವು ಏನು ಕ್ರಮ ತೆಗೆದು ಕೊಳ್ಳಬೇಕೋ ಅದನ್ನೆಲ್ಲಾ ತೆಗೆದುಕೊಂಡಿದ್ದೇವೆ.

ಶ್ರೀ ಐ. ಬಿ. ಶಂಕರ್.—ಬ್ಯಾಂಕ್‌ಗಳ ಮಾಜಿಖಾಂತರ ಆವರಿಗೆ ಸಹಾಯಧನವನ್ನು ಒದಗಿಸಿ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಹಾಗೆ ಸಹಾಯಧನ ಕೊಟ್ಟವರ ಹೆಸರನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಹಾಗೆಯೇ ಇಟ್ಟುಕೊಳ್ಳುತ್ತೀರಾ ? ಅಥವಾ ಅವರ ಹೆಸರನ್ನು ತೆಗೆದುಹಾಕುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರ ಪ್ರಶ್ನೆ ಅರ್ಥವಾಗಲಿಲ್ಲ.

ಶ್ರೀ ಐ. ಬಿ. ಶಂಕರ್.—ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಂನಲ್ಲಿ ಸಹಾಯಧನವನ್ನು ಪಡೆದು ಕೊಂಡವರಹೆಸರುಗಳನ್ನು ಮುಂದೆಂವರಿಸಿಕೊಂಡು ಹೋಗುತ್ತೀರಾ ? ಅಥವಾ ಲಿಸ್ಟ್‌ನಿಂದ ತೆಗೆದು ಹಾಕಂತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಎಂಪ್ಲಾಯ್‌ಮೆಂಟ್ ರಿಜಿಸ್ಟರ್‌ನಲ್ಲಿ ಅವರ ಹೆಸರು ಇರುತ್ತದೆ. ಅವರಿಗೆ ಬೇರೆ ಉದ್ಯೋಗ ಬೇಡವಾದರೆ ಅವರ ಹೆಸರು ಹೋಗಂತ್ತದೆ. ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಂನಲ್ಲಿ ಅವರ ಹೆಸರು ಇರುತ್ತದೆ.

ರಾಜ್ಯದಲ್ಲಿರುವ ಸರಕಾರಿ ವಿದ್ಯಾರ್ಥಿನಿಲಯಗಳು

೬೪೧ (ಇ) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸರ್ಕಾರಿ ವಿದ್ಯಾರ್ಥಿ ಗೃಹಗಳ ಸಂಖ್ಯೆ ಎಷ್ಟು? ಜಿಲ್ಲಾವಾರ ವಿವರ ನೀಡುವುದು,

ಆ) ಸರ್ಕಾರಿ ವಸತಿ ಗೃಹಗಳಲ್ಲಿ ಈಗಿರುವ ಗ್ರಾಮೀಣ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಹಾಗೂ ಅವರ ಸಲುವಾಗಿಯೇ ಸ್ಥಳ ಕಾಯ್ದಿರಿಸುವ ಯೋಜನೆ ಇದೆಯೇ?

ಇ) ಖಾಸಗಿ ವಿದ್ಯಾರ್ಥಿಗಳ ವಸತಿ ಗೃಹಗಳು ಎಷ್ಟು? ಹಾಗೂ ಆದರಲ್ಲಿ ಸರ್ಕಾರದವರಿಂದ ಅನುದಾನ ಪಡೆಯುತ್ತಿರುವ ವಸತಿ ಗೃಹಗಳ ಸಂಖ್ಯೆಗಳು ಎಷ್ಟು?

ಈ) ಗ್ರಾಮೀಣ ಪ್ರದೇಶ ಎಲ್ಲಾ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿ ಗೃಹಗಳ ಸೌಲಭ್ಯವನ್ನು ಒದಗಿಸಲಾಗುವುದೇ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೧೩೬೩, ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ.

ಆ) ಒಔ,೩೮೬ ಎಲ್ಲರೂ ೮ ಕಿ.ಮೀ. ದೂರದಿಂದ ಬಂದವರೇ ಆಗಿರಂತ್ತಾರೆ. ಈ ವಿದ್ಯಾರ್ಥಿಗಳಿಗಾಗಿಯೇ ಸ್ಥಳ ಕಾಯ್ದಿರಿಸುವ ಯೋಜನೆ ಇದೆ.

ಇ) ೫೧೬, ಇವುಗಳೆಲ್ಲವೂ ಸರ್ಕಾರದಿಂದ ಅನುದಾನ ಪಡೆಯುತ್ತಿವೆ. ಇವುಗಳಲ್ಲಿ ಖಳ ಖಾಸಗಿ ಕಾಲೇಜು ವಿದ್ಯಾರ್ಥಿನಿಲಯಗಳಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ ಖಾಸಗಿ ಸಂಸ್ಥೆಯವರು ನಡೆಸುತ್ತಿದ್ದಾರೆ.

ಈ) ಹಣ ಸೌಕರ್ಯಕ್ಕನುಗುಣವಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಗುತ್ತಿದೆ.